ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ(ವಾಣಿಜ್ಯ ನ್ಯಾಯಾಲಯ) , ಉಡುಪಿ ಜಿಲ್ಲೆ ಉಡುಪಿ

<u>Com.O.S.70/2022</u> <u>ಪಿ.ಡಬ್ಲ್ಯು: 1</u>

| | |
|---|---|
| ಸಾಕ್ಷಿದಾರರ ಹೆಸರು | ರಾಮಚಂದ್ರ ಹೆಚ್. |
| ತಂದೆಯ ಹೆಸರು | ಚೋಮ ನಾಯಕ್ |
| ವಯಸ್ಸು | 57 ವರ್ಷ |
| ಉದ್ಯೋಗ | ಬ್ರಾಂಚ್ ಮ್ಯಾನೇಜರ್, ಕರ್ನಾಟಕ ಬ್ಯಾಂಕ್ ಉಪ್ಪಿನಕೋಟೆ ಶಾಖೆ |
| ವಿಳಾಸ | ಉಪ್ಪಿನಕೋಟೆ |

ದಿನಾಂಕ: 24-05-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು

**<u>ಮುಂದುವರಿದ ಮುಖ್ಯ ವಿಚಾರಣೆ: ವಾದಿ ಪರ ಶ್ರೀ ಬಿ.ಎಂ.ವಿ. ವಕೀಲರ ಪರವಾಗಿ ಶ್ರೀ ಎಸ್.ಬಿ.ಎಂ. ವಕೀಲರಿಂದ</u>**

ನಾನು ಈದಿನ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ನಿಜ ಇರುತ್ತದೆ. ಅದರಲ್ಲಿರುವ ಸಹಿ ನನ್ನದೇ ಇರುತ್ತದೆ. ನಾನು ಅರ್ಜಿಯ ಜೊತೆಯಲ್ಲಿ ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ.

1. ಜಿಪಿಎ ನಕಲು ಹಾಜರುಪಡಿಸಿದ್ದೇನೆ ಅದನ್ನು ನಿಶಾನೆ ಪಿ.1 ಎಂದು ಗುರುತಿಸಿತು.

2.ಅವಧಿ ಸಾಲದ ಕರಾರು ಪತ್ರ ಹಾಜರುಪಡಿಸಿದ್ದೇನೆ ಅದನ್ನು ನಿಶಾನೆ ಪಿ. 2 ಎಂದು ಗುರುತಿಸಿತು.

3. ಅಡಮಾನ ಕರಾರು ಪತ್ರ ಹಾಜರುಪಡಿಸಿದ್ದೇನೆ ಅದನ್ನು ನಿಶಾನೆ ಪಿ 3 ಎಂದು ಗುರುತಿಸಿತು.

4. ಸಾಲ ದೃಢೀಕರಣ ಪತ್ರ ಹಾಜರುಪಡಿಸಿದ್ದೇನೆ ಅದನ್ನು ನಿಶಾನೆ ಪಿ 4 ಎಂದು ಗುರುತಿಸಿತು.

5. ಇನ್ನೊಂದು ಸಾಲ ದೃಢೀಕರಣ ಪತ್ರ ಹಾಜರುಪಡಿಸಿದ್ದೇನೆ ಅದನ್ನು ನಿಶಾನೆ ಪಿ 5 ಎಂದು ಗುರುತಿಸಿತು.

6. ಪ್ರತಿವಾದಿಗೆ ಬ್ಯಾಂಕಿನಿಂದ ಕಳುಹಿಸಿದ ನೋಟಿಸಿನ ಕಚೇರಿ ನಕಲು ಹಾಜರುಪಡಿಸಿದ್ದೇನೆ ಅದನ್ನು ನಿಶಾನೆ ಪಿ 6 ಎಂದು ಗುರುತಿಸಿತು.

7. ಎರಡು ಅಂಚೆ ಸ್ವೀಕೃತಿ ಪತ್ರಗಳನ್ನು ಹಾಜರುಪಡಿಸಿದ್ದೇನೆ ಅವುಗಳನ್ನು ನಿಶಾನೆ ಪಿ. 7 ಮತ್ತು 8 ಎಂದು ಗುರುತಿಸಿತು.

8.ವಾಹನ ಜಪ್ತಿ ಮಾಡುತ್ತೇವೆ ಎಂದು ಪತ್ರಿಕೆಯಲ್ಲಿ ಜಾಹಿರಾತು ಕೊಟ್ಟ ಬಗ್ಗೆ ಉದಯವಾಣಿ ದಿನಪತ್ರಿಕೆಯ ಪುಟ ಸಂಖ್ಯೆ 3 ಮತ್ತು 4 ಹಾಜರುಪಡಿಸಿದ್ದೇನೆ, ಸದರಿ ಪತ್ರಿಕೆಯ ಪೂರ್ಣ ಪುಟಗಳನ್ನು ಹಾಜರುಪಡಿಸದ ಕಾರಣ ನಿಶಾನೆ ಎಂದು ಗುರುತಿಸಿರುವುದಿಲ್ಲ.

9. ಪ್ರತಿವಾದಿಗೆ ಕಳುಹಿಸಿದ ಮತ್ತೊಂದು ನೋಟಿಸಿನ ಕಚೇರಿ ನಕಲು ಹಾಜರುಪಡಿಸಿದ್ದೇನೆ ಅದನ್ನು ನಿಶಾನೆ ಪಿ.9 ಎಂದು ಗುರುತಿಸಿತು.

10. ಅಂಚೆ ಸ್ವೀಕೃತಿ ಪತ್ರ ಹಾಜರುಪಡಿಸಿದ್ದೇನೆ ಅದನ್ನು ನಿಶಾನೆ ಪಿ.10 ಎಂದು ಗುರುತಿಸಿತು.

11. ಸಾಲ ದೃಢೀಕರಣ ಪತ್ರ ಹಾಜರುಪಡಿಸಿದ್ದೇನೆ ಅದನ್ನು ನಿಶಾನೆ ಪಿ.11 ಎಂದು ಗುರುತಿಸಿತು.

12. ಸಾಲ ಪಾವತಿಸುವಂತೆ ಪ್ರತಿವಾದಿಗೆ ಕೊಟ್ಟ ನೋಟಿಸಿನ ಕಚೇರಿ ನಕಲು ಹಾಜರುಪಡಿಸಿದ್ದೇನೆ ಅದನ್ನು ನಿಶಾನೆ ಪಿ.12 ಎಂದು ಗುರುತಿಸಿತು.

17. ಸಾಲದ ಖಾತೆಯ ಯಥಾನಕಲು ಹಾಜರುಪಡಿಸಿದ್ದೇನೆ ಅದನ್ನು ನಿಶಾನೆ ಪಿ 13 ಎಂದು ಗುರುತಿಸಿತು.

18. ಪ್ರತಿವಾದಿಗೆ ದಾವೆ ದಾಖಲು ಮಾಡುವ ಮೊದಲು ಮಧ್ಯಸ್ಥಿಕೆಗೆ ಕರೆದಿದ್ದು ಬರದ ಕಾರಣ ಆ ಬಗ್ಗೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಕೊಟ್ಟ ವರದಿ ಹಾಜರುಪಡಿಸಿದ್ದೇನೆ ಅದನ್ನು ನಿಶಾನೆ ಪಿ 14 ಎಂದು ಗುರುತಿಸಿತು.

ಕಾರಣ ದಾವೆಯಲ್ಲಿ ಕೇಳಿದಂತೆ ಡಿಕ್ರಿ ಮಾಡಬೇಕೆಂದು ಕೇಳುತ್ತೇನೆ.

**<u>ಪಾಟೀಸವಾಲುಃ</u>** <u>ಪ್ರತಿವಾದಿಯ ಪರ ವಕೀಲರ ಮನವಿ ಮೇರೆಗೆ ಪಾಟೀಸವಾಲು ಮುಂದೂಡಿದೆ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಶಾಂತವೀರ ಶಿವಪ್ಪ)
ಪ್ರಧಾನ ಜಿಲ್ಲಾ/ವಾಣಿಜ್ಯ ನ್ಯಾಯಾಧೀಶರು,
ಉಡುಪಿ